ಶ್ರೀ ಕೆ. ಶಿವಮೂರ್ತಿ: ಹೋದ ಸಲ ಹೊಸ ತಾಲ್ಲೂಕುಗಳನ್ನು ಮಾಡಿದರು.

ಅಧ್ಯಕ್ಷರು: ಈಗ ಅವರ ಹತ್ತಿರ ಇರುವುದನ್ನು ಹೇಳಿ, ಪ್ರಸ್ತಾವ ಇಲ್ಲವೆಂದು ಹೇಳಿದ್ದಾರೆ.

ಶ್ರೀ ವಿ. ಶ್ರೀನಿವಾಸಪ್ರಸಾದ್: 4 ಸಮಿತಿಗಳು ಶಿಫಾರಸ್ಸು ಮಾಡಿದ ಪ್ರಸ್ತಾವಗಳು ಬಂದಿದೆ. ಮಾನ್ಯ ಜಗದೀಶ್ ಶೆಟ್ಟರ್‌ರವರು ಘೋಷಣೆ ಮಾಡಿ 43 ತಾಲ್ಲೂಕಿನಲ್ಲಿ ಈ 4 ಸಮಿತಿಗಳು ಶಿಫಾರಸ್ಸು ಮಾಡದೇ ಇರತಕ್ಕಂಥ 5 ತಾಲ್ಲೂಕುಗಳನ್ನು ಘೋಷಣೆ ಮಾಡಿದ್ದೇವೆ.

ಅಧ್ಯಕ್ಷರು: ಇದಕ್ಕೆ ಸೀಮಿತವಾಗಿ ಮಾತ್ರ ಹೇಳಿ ಸಾಕು. ಇದು ಅಗುತ್ತದೆಯೇ ಅಥವಾ ಇಲ್ಲವೇ ಹೇಳಿ.

ಶ್ರೀ ವಿ. ಶ್ರೀನಿವಾಸಪ್ರಸಾದ್: ಈ ತರಹ ಇದೆ ನೋಡಿ, ಸರ್.

ಅಧ್ಯಕ್ಷರು: ಆಯಿತು, ಬಿಡಿ. ಶ್ರೀ ಸಿದ್ದು ನ್ಯಾಮಗೌಡ ಇಲ್ಲ. ಮಾನ್ಯ ಮುನಿಶಾಮಪ್ಪನವರು ಇಲ್ಲ.

7. ವಿಷಯ: ಜಪ್ತಿಯಾಗಿರುವ ಮರಳನ್ನು ಹರಾಜು ಮಾಡುವ ಬಗ್ಗೆ

ಶ್ರೀ ಗುರು ಪಾಟೀಲ್ ಶಿರವಾಳ (ಶಹಾಪುರ): ಮಾನ್ಯ ಅಧ್ಯಕ್ಷರೆ, ನಿನ್ನೆ ರಾಜ್ಯಪಾಲರ ಭಾಷಣದ ಮೇಲೆ ಪ್ರಸ್ತಾಪ ಮಾಡುವಂಥ ಸಂದರ್ಭದಲ್ಲಿಯೂ ಕೇಳಿದ್ದೆ, ಈಗಲೂ ಅದನ್ನು ಹೇಳುತ್ತಿದ್ದೇನೆ. ಶಹಾಪೂರ ತಾಲ್ಲೂಕಿನ ಕೃಷ್ಣಾ ನದಿಗೆ ಅನುಗುಣವಾಗಿ ಬರತಕ್ಕಂಥ ಹಳ್ಳಿಗಳಲ್ಲಿ ಹಯ್ಯಳ ಬಿ., ಐಕೂರು, ಎಕ್‌ಶೆಟ್ಟಿ, ಕೊಲ್ಲೂರು ಮತ್ತು ಗೌಡಗೇರಿ ಊರುಗಳಲ್ಲಿ ಸುಮಾರು ಒಂದು ವರ್ಷದ ಕೆಳಗೆ ಅಕ್ರಮವಾಗಿ ಮರಳನ್ನು ಕೋಟ್ಯಂತರ ರೂ.ಗಳಷ್ಟು ಆಗ ಲೂಟಿ ಮಾಡಿದರು. ಅದರ ಒಂದು ಭಾಗವಾಗಿ ಇನ್ನೂ ಶೇಖರಣೆಯಾಗಿ ಜಪ್ತಿ ಮಾಡಿರುವಂಥದ್ದು ಇದೆ. ಜಪ್ತಿಯಾಗಿದ್ದು ಅದು ಇನ್ನೂವರೆಗೆ ಹರಾಜು ಆಗಿರುವುದಿಲ್ಲ.

ಅಧ್ಯಕ್ಷರು: ಮರಳು ಜಪ್ತಿ ಆಗಿದ್ದು ಹರಾಜು ಆಗಿರುವುದಿಲ್ಲವೆಂದು ಹೇಳುತ್ತಿದ್ದಾರೆ. ಅದರ ಬಗ್ಗೆ ಉತ್ತರ ಹೇಳಿ. ಮಾನ್ಯ ಟಿ.ಬಿ. ಜಯಚಂದ್ರರವರೆ, ಮಾಹಿತಿ ಇಲ್ಲದಿದ್ದರೆ ಆ ಮೇಲೆ ಕಳುಹಿಸಿ ಕೊಡಿ.

ಶ್ರೀ ಟಿ.ಬಿ. ಜಯಚಂದ್ರ (ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಮತ್ತು ಪಶುಸಂಗೋಪನೆ ಸಚಿವರು): ಮಾನ್ಯ ಅಧ್ಯಕ್ಷರೆ, ಆಮೇಲೆ ಮಾಹಿತಿಯನ್ನು ಕಳುಹಿಸಿ ಕೊಡುತ್ತೇನೆ.

ಅಧ್ಯಕ್ಷರು: ಮರಳು ಜಪ್ತಿ ಮಾಡಿ ಇನ್ನೂ ಹರಾಜು ಮಾಡದೇ ಇಟ್ಟುಕೊಂಡಿದ್ದರೆ ಯಾರಾದರೂ ವ್ಯವಹಾರ ಮಾಡುವವರು ಇರುತ್ತಾರೇನು?

ಶ್ರೀ ಗುರು ಪಾಟೀಲ್ ಶಿರವಾಳ: ಮಾನ್ಯ ಅಧ್ಯಕ್ಷರೆ, ತಮ್ಮ ಗಮನಕ್ಕೆ ತಂದು ಬಿಡುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ: ಮಾನ್ಯ ಅಧ್ಯಕ್ಷರೆ, ಮಾನ್ಯ ಲೋಕೋಪಯೋಗಿ ಸಚಿವರು ಇದ್ದಾರೆಂದು ನಾನು ತಿಳಿದುಕೊಂಡಿದ್ದೆ. ಇದರ ಬಗ್ಗೆ ನಾನು ಕ್ರಮ ತೆಗೆದುಕೊಂಡು ಇವತ್ತೇ ಜಿಲ್ಲಾಧಿಕಾರಿಗಳ ಜೊತೆಯಲ್ಲಿ ಮಾತನಾಡುತ್ತೇನೆ.

ಅಧ್ಯಕ್ಷರು: ಆಯಿತು.

8. ವಿಷಯ: ಮೊಬೈಲ್ ಟವರ್ ಜೋಡಣೆ ಬಗ್ಗೆ

ಶ್ರಿ ಟಿ.ಬಿ. ಜಯಚಂದ್ರ (ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಪಶುಸಂಗೋಪನೆ ಸಚಿವರು) (ಮಾನ್ಯ ಮುಖ್ಯಮಂತ್ರಿಯವರ ಪರವಾಗಿ): ಮಾನ್ಯ ಅಧ್ಯಕ್ಷರೆ, ಇತ್ತೀಚಿನ ದಿನಗಳಲ್ಲಿ ವೈಜ್ಞಾನಿಕವಾಗಿ ರಾಜ್ಯದೆಲ್ಲೆಡೆ ಮೊಬೈಲ್ ಟವರ್‌ಗಳನ್ನು ಅಳವಡಿಸಲಾಗುತ್ತಿದ್ದು, ಇವುಗಳ ಅಳವಡಿಕೆಯಿಂದ ಸಾರ್ವಜನಿಕರ ಮೇಲಾಗುತ್ತಿರುವ ದುಷ್ಪರಿಣಾಮಗಳು ಹಾಗೂ ಮೊಬೈಲ್ ಟವರ್‌ಗಳ ಅಳವಡಿಕೆಗೆ ಸೂಕ್ತ ಮಾರ್ಗಸೂಚಿಗಳನ್ನು ಅಳವಡಿಸುವ ಕುರಿತು ಸರ್ಕಾರದ ಸುತ್ತೋಲೆ ಸಂಖ್ಯೆ: ನಅಇ/55/ಜಿಇಎಲ್/2005, ದಿನಾಂಕ: 02–